ಪದ್ಮಾ ಶ್ರೀರಾಮ

ಕಲೆ: ಪ್ರವೀಣ್ ಆಚಾರ್ಯ

# ತೊಟ್ಟಿಮನೆ

ಮಹಾಲಯ ಮುಗಿದು ದಸರೆಯ ಸಂಭ್ರಮ ಕಾಲಿಟ್ಟಿತ್ತು. ಕಲ್ಯಾಣಿಗೆ ಇದ್ದಕಿದ್ದಂತೆ ತಾನು ಮರೆತಿದ್ದು ಪಟ್ಟನೆ ನೆನಪಾಯಿತು. ಹೌದು ಮಹಾಲಯದ ಪಕ್ಷಕ್ಕೆ ಚಿಕ್ಕಿಯ ಊರಿಗೆ ಹೋಗಲು ನಾನೇಕೆ ಮರೆತೆ? ಹೌದು ಕೆಲಸಗಳ ಒತ್ತಡ ಹಾಗೆ ಮಾಡಿಸಿತು. ಚಿಕ್ಕಿಯ ನೆನಪಾದಂತೆ ಅವಳು ಮರುಬೆಳಗ್ಗೆ ಚಿಕ್ಕಿಯ ಊರಿಗೆ ಹೊರಟೇ ಬಿಟ್ಟಳು.

ಬಸ್ಸಿಳಿದು ಚಿಕ್ಕಂದಿನ ಚಿರಪರಿಚಿತ ಸಂದಿಗೊಂದಿಗಳನ್ನು ಬಳಸಿ ಬಂದಾಗ ಚಿಕ್ಕಿಯ ಮನೆಬಾಗಿಲು ತೆರೆದಿತ್ತು. ಮನೆಯ ಶುಭ್ರ ಮೌನದ ವಾತಾವರಣ ಕಲ್ಯಾಣಿಯೊಳಗೆ ಅಂತರ್ಗತವಾಗಿದ್ದ ಪಟ್ಟಣದ ಧಾವಂತವನ್ನು ತಾತ್ಕಾಲಿಕವಾಗಿಯಾದರೂ ದೂರ ಮಾಡುವಂತಿತ್ತು.

ಮಾವ ಎಲ್ಲೋ ಗದ್ದೆ ಕಡೆ ಹೋಗಿರಬೇಕೆಂದುಕೊಂಡು ಕಲ್ಯಾಣಿ, ''ಚಿಕ್ಕಿ...'' ಎಂದು ಕೂಗಿದಳು. ನೀಳ ಶರೀರದ, ಕೂದಲನ್ನು ಎಣ್ಣೆಗಂಟು ಹಾಕಿದ ಚಿಕ್ಕಿ ಅಡಿಗೆಮನೆಯಿಂದ ಹೊರಬಂದು ಕಲ್ಯಾಣಿಯನ್ನು ಕಂಡ ಒಡನೆ ನಗುಮುಖವಾಗಿ, ''ಬಂದ್ಯಾ ಮಗಾ? ಅಬ್ಬಕ್ಕಂತೂ ಬರ್ಲಿಲ್ಲ, ಈಗ್ಲಾದರೂ ಮನಸ್ಸು ಬಂತಲ್ಲಾ'' ಎಂದು ಸಂತೋಷ ವ್ಯಕ್ತಪಡಿಸಿ, ''ಬಾವ್ವ'' ಎಂದು ಕರೆದು, ಇಬ್ಬರೂ ಆ ಚೌಕಟ್ಟಿನ ತೊಟ್ಟಿ ಮನೆಯ ಒಂದು ಪಾರ್ಶ್ವದಲ್ಲಿ ಹಾಕಿದ್ದ ಕುರ್ಚಿಗಳಲ್ಲಿ ಕುಳಿತರು. ಒಂದು ಕಾಲದಲ್ಲಿ ಅತಿಥಿಗಳಿಗೆ ಹಾಸುತ್ತಿದ್ದ ಚಾಪೆ ಹೋಗಿ ಕುರ್ಚಿ ಬಂದಿತ್ತು. ಆ ತೊಟ್ಟಿಮನೆಯ ಒಂದು ಪಾರ್ಶ್ವದಲ್ಲಿ ಮಲಗುವ ಮನೆ, ದೇವರ ಮನೆ, ಅಡಿಗೆ ಮನೆ, ಊಟದ ಮನೆ ಉಗ್ರಾಣಗಳಿದ್ದವು. ಎದುರು ಪಾರ್ಶ್ವ ಹಸುಕರುಗಳ ಕೊಟ್ಟಿಗೆಯಾಗಿತ್ತು. ಎತ್ತುಗಳಿಗೆ ಹಿತ್ತಲಲ್ಲಿ ಬೇರೆ ಕೊಟ್ಟಿಗೆ, ಉಗ್ರಾಣ, ದೇವರ ಮನೆಗಳ ಮೇಲೆ ಅಟ್ಟ. ಅಟ್ಟದ ತುಂಬಾ ಸಾಮಾನುಗಳು. ಅಟ್ಟದ ನೆನಪಾದಾಗ ನಗು ಬಂದಿತು. ಊಟದ ಮನೆಯಿಂದ ಹೊರಕ್ಕೆ ತೊಟ್ಟಿಯ ಸುತ್ತಲೂ ಇರುವ ಹಜಾರಕ್ಕೆ ಬರಲು ಇದ್ದ ಹಳೆ ಕಾಲದ ಮಜಬೂತಾದ ಬಾಗಿಲಿಗೆ ಕೊಟ್ಟಿರುತ್ತಿದ್ದ ಅಡ್ಡಪಟ್ಟಿಯ ಮೇಲೆ ಕಾಲಿಟ್ಟು ಚಿಕ್ಕಿ ಅಟ್ಟಕ್ಕೆ ಹತ್ತಿ ಬೇಕಾದ ಸಾಮಾನುಗಳನ್ನು ಇಳಿಸಿಬಿಡುತ್ತಿದ್ದಳು. ಕಲ್ಯಾಣಿಗೂ ಹಾಗೆ ಹತ್ತಲು ವಿಪರೀತ ಆಸೆಯಾಗುತ್ತಿತ್ತು. ಚಿಕ್ಕವಳು ಬಿದ್ದುಗಿದ್ದಾಳು ಎಂದು ಅಟ್ಟ ಹತ್ತಲು ಬಿಡುತ್ತಿರಲಿಲ್ಲ. ಈಗ ಅಟ್ಟಕ್ಕೆ ಏಳೆಂಟು ಮೆಟ್ಟಿಲುಗಳನ್ನು ಕಟ್ಟಿಸಿದ್ದಾರೆ. ಕಲ್ಯಾಣಿ ಸುಮ್ಮನೆ ನೋಡಿ ಪುನಃ ಕುರ್ಚಿಯನ್ನು ಆಶ್ರಯಿಸಿದಳು. ಅಟ್ಟ ಹತ್ತುವ ಉಮೇದು ಈಗಿರಲಿಲ್ಲ.

ಅಷ್ಟರಲ್ಲಿ ಚಿಕ್ಕಿ ತಟ್ಟೆ ತುಂಬ ತಿಂಡಿ ಮತ್ತು ಕಾಫಿ ತಂದಳು. ''ಮಗಾ, ಪಕ್ಷಕ್ಕಂತೂ ಬರ್ಲಿಲ್ಲ, ನೋಡು ನಿನಗಿಷ್ಟವಾದ ಪಕ್ಷದ ತಿಂಡಿ ಕಜ್ಜಾಯ, ಚಕ್ಲಿ ಎಲ್ಲಾ ಅವೆ. ತಳಾರದಲ್ಲಿ ತಿನ್ನವ್ವ'' ಎಂದು ಉಪಚರಿಸಿದಾಗ ಅವಳ ಪ್ರೀತಿಯ ಬಾವಣಿಕೆಗೆ ತಾಯಿ ಕಳೆದುಕೊಂಡಿದ್ದ ಕಲ್ಯಾಣಿಯ ಮನಸ್ಸು ತುಂಬಿ ಬಂದು ಆರ್ದ್ರವಾಯಿತು.